## ‘ಎಲೆಕ್ಟ್ರಿಕಲ್ ಸರ್ಕ್ಯೂಟ್’ ಸಮಸ್ಯೆಗೆ ಚಿಕಿತ್ಸೆ

# ವ್ಯಕ್ತಿಯ ಹೃದಯಬಡಿತ ಸಹಜಸ್ಥಿತಿಗೆ!

ಬೆಂಗಳೂರು: ಹೃದಯದ ಅಸಹಜ ‘ಎಲೆಕ್ಟ್ರಿಕಲ್ ಸರ್ಕ್ಯೂಟ್’ನಿಂದ ಪ್ರಾಣಾಪಾಯ ಎದುರಿಸುತ್ತಿದ್ದ ವ್ಯಕ್ತಿಯೊಬ್ಬರಿಗೆ ನಗರದ ಕನ್ನಿಂಗ್‌ಹ್ಯಾಂ ರಸ್ತೆಯ ಫೋರ್ಟಿಸ್ ಆಸ್ಪತ್ರೆ ವೈದ್ಯರು ಅಪರೂಪದ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ಹೃದಯ ಬಡಿತವನ್ನು ಸಾಮಾನ್ಯ ಸ್ಥಿತಿಗೆ ತಂದಿದ್ದಾರೆ.

‘ಕ್ಲಿಷ್ಟಕರವಾದ ಇಂತಹ ಹೃದಯ ಶಸ್ತ್ರಚಿಕಿತ್ಸೆ ನಡೆಸಿರುವುದು ದಕ್ಷಿಣ ಭಾರತದಲ್ಲಿ ಇದೇ ಮೊದಲು’ ಎಂದು ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ಜಯಕೀರ್ತಿ ವೈ ರಾವ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಹೃದಯದಲ್ಲಿ ಉಂಟಾಗಿದ್ದ ಅಸಹಜ ‘ಎಲೆಕ್ಟ್ರಿಕಲ್ ಸರ್ಕ್ಯೂಟ್’ ನಿಷ್ಕ್ರಿಯಗೊಳಿಸುವುದು ಸುಲಭದ ಕೆಲಸವಲ್ಲ. ತುಸು ಹೆಚ್ಚು–ಕಡಿಮೆ ಆಗಿದ್ದರೂ ರೋಗಿಗೆ ಪ್ರಾಣಾಪಾಯ ಆಗುತ್ತಿತ್ತು. ಆದರೆ, ಆಸ್ಪತ್ರೆಯ ಎಲೆಕ್ಟ್ರೋಫಿಸಿಯೋಲಜಿ ತಜ್ಞರ ತಂಡ ಈ ಕ್ಲಿಷ್ಟ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸಿತು’ ಎಂದು ವಿವರಿಸಿದರು.

‘ತೀವ್ರ ಹೃದಯ ಬಡಿತದಿಂದ ಬಳಲುತ್ತಿದ್ದ ಕೆ.ಆರ್. ಚೌಧರಿ ತಮ್ಮ ಕುಟುಂಬದ ವೈದ್ಯರಿಂದ ಇಸಿಜಿಗೆ ಒಳಗಾಗಿದ್ದರು. ಹೃದಯದಲ್ಲಿ ಅಸಹಜ ಸಮಸ್ಯೆ ಇರುವುದು ಪರೀಕ್ಷೆಯಿಂದ ಗೊತ್ತಾಗಿತ್ತು. ಬಳಿಕ ಅವರು ಫೋರ್ಟಿಸ್ ಆಸ್ಪತ್ರೆಗೆ ಬಂದರು. ಅವರನ್ನು ಹೆಚ್ಚಿನ ತಪಾಸಣೆಗೆ ಒಳಪಡಿಸಿದಾಗ ಹೃದಯದಲ್ಲಿ ‘ಎಲೆಕ್ಟ್ರಿಕಲ್ ಸರ್ಕ್ಯೂಟ್’ ಸಮಸ್ಯೆ ಇರುವುದು ತಿಳಿಯಿತು’ ಎಂದು ಮಾಹಿತಿ ನೀಡಿದರು.

‘ಆರೋಗ್ಯವಂತ ವ್ಯಕ್ತಿಯ ಹೃದಯ ಬಡಿತ ಸಾಮಾನ್ಯವಾಗಿ ನಿಮಿಷಕ್ಕೆ 72ರಿಂದ 100ರಷ್ಟು ಇರುತ್ತದೆ. ಆದರೆ, ಈ ವ್ಯಕ್ತಿಯಲ್ಲಿ ನಿಮಿಷಕ್ಕೆ 300 ಸಲ ಹೃದಯ ಬಡಿತ ಉಂಟಾಗುತ್ತಿತ್ತು’ ಎಂದು ಹೇಳಿದರು.

‘ಕತ್ತಿನ ಮೂಲಕ ಕೆಥೆಟರ್ (ಕಿರಿದಾದ, ಹೊಂದಿಕೊಳ್ಳುವ ಕೊಳವೆಗಳು) ಅನ್ನು ರಕ್ತನಾಳಕ್ಕೆ ಸೇರಿಸಲಾಯಿತು. ಅದು ಹೃದಯವನ್ನು ತಲುಪುವಂತೆ ಮಾಡಲಾಯಿತು. ಕೆಥೆಟರ್ ಮೂಲಕ ಹೃದಯದ ಚಟುವಟಿಕೆಗಳನ್ನು ದಾಖಲು ಮಾಡಿಕೊಂಡು ಅಗತ್ಯ ಪ್ರಮಾಣದ ಉಷ್ಣ ಉತ್ಪಾದಿಸಿ, ‘ಎಲೆಕ್ಟ್ರಿಕಲ್ ಸರ್ಕ್ಯೂಟ್’ ನಿಷ್ಕ್ರಿಯ ಮಾಡಲಾಯಿತು. ಇದರಿಂದ ಹೃದಯದಲ್ಲಿ ಸಣ್ಣ ಪ್ರಮಾಣದ ಅಂಗಾಂಶ ನಷ್ಟವಾಗಿದೆ’ ಎಂದು ವಿವರಿಸಿದರು.